4. Would the Government take necessary steps to avail the benefit to the maximum extent by all SC/ST applicants ?

5. Is it a fact that the sanction of loan does not require any collateral security ? if so, state the reasons why the collateral security is insisted on from the unemployed ?

Sri S. R. Bommai (Minister for Industries) :—

Text of the Answer :

1. A total number of 6,151 applications have been received.

2. Out of the above applications, 401 are from Scheduled Caste and Scheduled Tribes.

3. No. Out of 401 applicants belonging to Scheduled Caste/ Scheduled Tribe, 215 appeared for interview and the rest did not turn up. Among these 215, 132 applicants were eligible to avail the loan facilities and their cases have been recommend to the respective banks for sanction of loan. Out of these, 12 cases have been recommended for sanction of full amount of Rs. 25,000/— each, considering their projects/

4. The Governmsnt have already taken steps to provide facilities to all eligible Scheduled Caste and Scheduled Tribe educated unemployed.

5. Yes. No instances have come to the notice so far.

ವಿಷಯ.--ಹೊನ್ನಾವರದಲ್ಲಿ ಪ್ರವಾಸೋದ್ಯಮ ಕೇಂದ್ರವನ್ನು ಸ್ಥಾಪಿಸುವುದು.

ಪ್ರ. ಸಂಖ್ಯೆ 490 (1336) ಶ್ರೀ ಎಂ. ಪಿ. ಕರ್ಕಿ(ಕುಮಟ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಪ್ರಚಾರ ಮಂತ್ರಿ ವಾರ್ತಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ?

ಅ. ಹೊನ್ನಾವರದ ಸುತ್ತಮುತ್ತ ಪ್ರವಾಸಿಗರನ್ನು ಆಕರ್ಷಿಸುವ ಉತ್ತಮ ಸ್ಥಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಪ್ರವಾಸೋದ್ಯಮ ಕೇಂದ್ರ ಸ್ಥಾಪಿಸಲು ಸರಕಾರದವರು ಉದ್ದೇಶಿಸಿರುವರೆ?

ಶ್ರೀ ಎಂ. ರಘುಪತಿ.—(ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು

ಅ. ಹೌದು.

ಆ. ಆರ್ಥಿಕ ಕೊರತೆಯಿಂದಾಗಿ 1983-84 ಮತ್ತು 1984-85ರ ಯೋಜನೆಯಲ್ಲಿ ಹೊನ್ನಾವರದ ಸುತ್ತ-ಮುತ್ತ ಇರುವ ಆಕರ್ಷಿಸುವ ಸ್ಥಳಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ಆಳವಡಿಸಿಕೊಂಡಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಿಸಿದಲ್ಲಿ ಮುಂಬರುವ ವರ್ಷಗಳಲ್ಲಿ ಆದ್ಯತೆ ಮೇಲೆ ಅಭಿವೃದ್ಧಿಪಡಿಸಲಾಗುವುದು.

ಮುಧೋಳ ತಾಲ್ಲೂಕಾ ಲೋಕಾಪುರ ಸಿಮೆಂಟ್ ಸಂಸ್ಥೆ

ಶ್ರೀ ಜಿ. ಎಸ್. ಬಾಗಲಕೋಟಿ (ಜಮುಖಂಡಿ)–

491 (1637) ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ. ಮುಧೋಳ ತಾಲ್ಲೂಕಿನ ಲೋಕಾಪುರದಲ್ಲಿ ಸಿಮೆಂಟ್ ಉತ್ಪಾದನೆ ಮಾಡುತ್ತಿರುವ ಲೋಕಾಪುರ ಸಿಮೆಂಟ್ ಎಂಬ ಖಾಸಗೀ ಸಂಸ್ಥೆಗೆ ಎಷ್ಟು ಪ್ರದೇಶವನ್ನು ಎಷ್ಟು ವರ್ಷಗಳಿಗೆ ಹಾಗೂ ಯಾವ ಕರಾರಿನ ಮೇರೆಗೆ ಕೊಡಲಾಗಿದೆ;

ಆ. ಸರ್ಕಾರದಿಂದ ಆದಕ್ಕೆ ಏನಾದರೂ ಸಹಾಯ ಸಾಲ ಕೊಡಲಾಗಿದೆಯೆ;

ಇ. ಸದರೀ ಸಿಮೆಂಟ್ ಕಾರ್ಖಾನೆಯವರು ಉತ್ಪಾದನೆ ಮಾಡಿ ಸಿಮೆಂಟ್‌ನೆಲ್ಲ ಪರರಾಜ್ಯಗಳಿಗೆ ಹೆಚ್ಚಿನ ಬೆಲೆಗೆ ಮಾರುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಈ. ಆದರಿಂದಾಗಿ ಆ ಭಾಗದ ಜನರಿಗೆ ಸಿಮೆಂಟ್ ದೊರಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದಾರೆಯೆ?

ವಿಷಯ:—ಜಮಖಂಡಿ ತಾಲ್ಲೂಕಿನ ಜಖನೂರ ಜಾಗರೀ.

ಪ್ರ. ಸಂಖ್ಯೆ 492 (1638) ಶ್ರೀ ಗು.ಶಿ. ಬಾಗಲಕೋಟಿ. (ಜಮಖಂಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಕೈಗಾರಿಕಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಆ. ಜಮಖಂಡಿ ತಾಲ್ಲೂಕಿನ ಜಖನೂರ ಗ್ರಾಮದಲ್ಲಿ ಜಖನೂರ ಜಾಗರಿ ಎಂಬ ಖಾಸಗೀ ಕಾರ್ಖಾನೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ. ಈ ಕಾರ್ಖಾನೆಗೆ ಇರುವಂಥ ಪರವಾನಿಗೆ ಯಾವುದು;

ಇ. ಸದರೀ ಕಾರ್ಖಾನೆಯವರು ಬೆಲ್ಲವನ್ನು ಮಾಡೇ ರಸ ತಯಾರಿಸಿ ಬೇರೆ ಜಿಲ್ಲೆಗೆ ಕಳುಹಿಸುವ ವಿಚಾರ ಸರಕಾರದವರ ಗಮನಕ್ಕೆ ಬಂದಿದೆಯೆ ;

ಈ. ಹಾಗಿದ್ದಲ್ಲಿ ಅವರಿಗೆ ಸದರಿ ಬೆಲ್ಲದ ರಸವನ್ನು ತಯಾರಿಸಲು ಪರವಾನಿಗೆ ನೀಡ ಲಾಗಿದೆಯೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು):—

ಆ. ಹೌದು.

ಆ. ಹೌದು. ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್, ಗುಲ್ಬರ್ಗ ಅವರಿಂದ ಪರವಾನೆಯನ್ನು ಪಡೆದಿದ್ದಾರೆ.

ಇ. ಹೌದು. ಬೆಳಗಾಂ ಜಿಲ್ಲೆಯಲ್ಲಿರುವ ಉಗಾರ್ ಶುಗರ್ ಫ್ಯಾಕ್ಟರಿಯವರಿಗೆ ಸರಬರಾಜು ಮಾಡುತ್ತಿದ್ದಾರೆ.

ಈ. ಹೌದು. ಬೆಲ್ಲವನ್ನು 1973–74ರವರೆಗೆ ತಯಾರಿಸುತ್ತಿದ್ದರು, ಬೆಲ್ಲದ ಪಾಕವನ್ನು ತಯಾರಿಸುವುದಕ್ಕೆ ಪರವಾನೆಯನ್ನು ಪಡೆದಿದ್ದಾರೆಯೆ ಎಂಬುವ ಬಗ್ಗೆ ಸಕ್ಕರೆ ನಿರ್ದೇಶ ಕರಿಗೆ ವಿಚಾರಣೆ ಮಾಡುವಂತೆ ಆದೇಶಿಸಲಾಗಿದೆ.

1388–ಶ್ರೀ ಎಸ್. ಕೆ. ಕಾಂತ, (ಗುಲ್ಬರ್ಗ) ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವರೆ :—

ಆ. ಬೀದರ್ ಮತ್ತು ಕಲ್ಬರ್ಗಿ ಜಿಲ್ಲೆಗಳಲ್ಲಿ ಓಡುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಅಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸದಿರಲು ಕಾರಣವೇನು ;

ಆ. ಈ ಬಸ್ಸುಗಳು ಸಂಚರಿಸುವ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಯೋಜನೆ ಇದೆಯೆ, ಹಾಗಿದ್ದಲ್ಲಿ ಆ ಮಾರ್ಗಗಳನ್ನು ಎಂದು ರಾಷ್ಟ್ರೀಕರಣ ಮಾಡಲಾಗುವುದು ;

ಇ. ಸದರಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದಲ್ಲಿ ಖಾಸಗೀ ಬಸ್ಸುಗಳ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸೇವೆಯಲ್ಲಿ ಮುಂದುವರಿಸ ಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು) :—

ಆ. ಖಾಸಗೀ ಬಸ್ಸುಗಳ ಸಂಖ್ಯೆ ಈ ಕೆಳಗೆ ಸೂಚಿಸಿದೆ.

ಬೀದರ್-64
ಗುಲ್ಬರ್ಗ–94